ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎಸ್.ಎನ್.ಜಿ ವಕೀಲರಿಂದಃ

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ವಂಶವೃಕ್ಷದ ದೃಢೀಕರಣ ಮತ್ತು ವಂಶವೃಕ್ಷದ ಪ್ರಮಾಣಪತ್ರದ ದೃಢೀಕೃತ ನಕಲುಗಳನ್ನು ಒಟ್ಟಾಗಿ ನಿಪಿ-1 ಎಂದು, ಜೀವನ್.ಆರ್ ರವರ ಜನನ ಪ್ರಮಾಣಪತ್ರದ ದೃಢೀಕೃತ ನಕಲನ್ನು ನಿಪಿ-2 ಎಂದು, ದರ್ಶನ್.ಆರ್ ರವರ ಜನನ ಪ್ರಮಾಣಪತ್ರದ ದೃಢೀಕೃತ ನಕಲನ್ನು ನಿಪಿ-3 ಎಂದು, ಜೀವನ್.ಆರ್ ರವರ ಆಧಾರ್ ಕಾರ್ಡಿನ ದೃಢೀಕೃತ ನಕಲನ್ನು ನಿಪಿ-4 ಎಂದು, ದರ್ಶನ್.ಆರ್ ರವರ ಆಧಾರ್ ಕಾರ್ಡಿನ ದೃಢೀಕೃತ ನಕಲನ್ನು ನಿಪಿ-5 ಎಂದು, 25 ಪಹಣಿ ಪತ್ರಿಕೆಗಳನ್ನು ನಿಪಿ-6 ರಿಂದ ನಿಪಿ-30 ಎಂದು, 2 ಮ್ಯುಟೇಶನ್ ರಿಜಿಸ್ಟರ್ ಪ್ರತಿಗಳನ್ನು ನಿಪಿ-31 ಮತ್ತು ನಿಪಿ-32 ಎಂದು, ದಿನಾಂಕ 14.03.2016 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ-33 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.